# ಮಿಡಿದ ತಂತಿ

■ ಗೀತಾ ಕುಂದಾಪುರ

'ಆಲೋಚನೆ ಬೇಡ, ಬನ್ನಿ ಮೇಡಂ ನಮ್ಮ ಮನೆಗೆ', 'ನಿಮ್ಮ ಮುಖದಲ್ಲಿ ಮುಗುಳ್ನಗು ಮಾಯವಾಗಿದೆಯಲ್ಲಾ, ಯಾರಪ್ಪ ಓಡಿಸಿದ್ದು', 'ಚಿಂತೆಗಳು ಚಿತೆಯತ್ತ ಕೊಂಡೊಯ್ಯುತ್ತದಂತೆ' ಆಡಿಟರ್ ರಾಜೇಶನೆಂದಾಗ ನಿಟ್ಟುಸಿರು ಬಿಟ್ಟೆ. ಈಗೀಗ ರಾಜೇಶನಿಂದ ಇಂತಹ ಮಾತುಗಳು ಸಾಮಾನ್ಯವಾಗಿತ್ತು, ಉಪದೇಶ ಕೊಡುವುದು ಸುಲಭ, ಅನುಸರಿಸುವುದು ತೀರ ಕಷ್ಟದ ಕೆಲಸ, ಅದೂ ಯಾವ ಉದ್ದೇಶವಿಟ್ಟು ಹೇಳುತ್ತಿದ್ದಾರೊ ಸರಿಯಾಗಿ ತಿಳಿಯದು. ಆಶ್ರಮದ ಜೀವನ ಮನಸ್ಸಿಗೆ ನೆಮ್ಮದಿ ತಂದಿತ್ತು, ಜೀವನದ ಕಷ್ಟಗಳೇ ಸಾಕಷ್ಟು ಪಾಠ ಕಲಿಸಿತ್ತು, ಸಂಬಂಧಗಳಿಂದ ದೂರ ನಿಂತಾಗ ಮನಸ್ಸು ಶಾಂತವಾಗಿತ್ತು. ನನಗಿಂತ ವಯಸ್ಸಿನಲ್ಲಿ ಸಾಕಷ್ಟು ಚಿಕ್ಕವರಾದ ರಾಜೇಶ ಮತ್ತೆ ನನ್ನನ್ನು ಚಿಂತಿಸುವಂತೆ ಮಾಡುತ್ತಿದ್ದಾರೆ ಅನ್ನಿಸಿತು. ಜೀವನದಲ್ಲಿ ನಾನು ಯಾವುದರ ಬಗ್ಗೆಯಾದರೂ ಹೆಚ್ಚು ಚಿಂತಿಸಿದ್ದಿಲ್ಲ, ನನ್ನದೇ ಜೀವನದಲ್ಲಿ ನಾನು ನಿರ್ಧಾರ ತೆಗೆದುಕೊಂಡದ್ದೂ ಬಹಳ ಕಡಿಮೆ. ಯಾರೋ ನಿರ್ಧಾರ ತೆಗೆದುಕೊಂಡರೂ ಇಲ್ಲವೇ ಅದು ವಿಧಿಯ ನಿರ್ಧಾರವಾಗಿತ್ತು.

ನನ್ನ ಮನದ ತಳಮಳ ಓದಿಕೊಂಡವರಂತೆ ರಾಜೇಶ 'ಮೇಡಂ, ಅವರವರ ಜೀವನದ ನಿರ್ಧಾರವನ್ನು ಅವರೇ ತೆಗೆದುಕೊಳ್ಳಬೇಕು, ನಾವು ಬದುಕುವುದು ನಮಗಾಗಿ, ಬೇರೆಯವರಿರಾಗಿ ಅಲ್ಲ' ಎಂದರು. 'ಒಂದು ಕೆಲಸ ಮಾಡೋಣ ಈ ಭಾನುವಾರ ನಮ್ಮ ಮನೆಗೆ ಕರೆದುಕೊಂಡು ಹೋಗುತ್ತೇನೆ, ಮನೆಯ ಎಲ್ಲರೊಡನೆ ಮಾತನಾಡಿ ನಮ್ಮ ಮನೆಯವರ ಬಗ್ಗೆ ಅಭಿಪ್ರಾಯ ತಿಳಿಸಿ' ರಾಜೇಶ ಎಂದಾಗ ಸರಿ ಎಂದೆ.

ಬಂತು ಆ ಭಾನುವಾರ, ರಾಜೇಶನ ಮನೆಯವರನ್ನೆಲ್ಲಾ ಭೇಟಿಯಾಗುವ ದಿನ. 10 ಗಂಟೆಯಾಗುತ್ತಿದ್ದಂತೆ ಆಶ್ರಮದ ಗೇಟು ದಾಟಿ ದಾರಿಯಲ್ಲಿ ಮೊದಲು ಸಿಕ್ಕುವ ಎಡ ತಿರುವಿನಲ್ಲಿ ನಿಂತೆ. 10 ನಿಮಿಷದಲ್ಲಿ ರಾಜೇಶರ ಬಿಳಿ ಬೆಂಜ್ ಕಾರು ಬರುತ್ತಿರುವುದು ಕಾಣಿಸಿತು. ಕಾರಲ್ಲಿ ಕೂತಾಗ ನನ್ನ ಬಿಳಿಚಿಕೊಂಡ ಮುಖ ಕಂಡ ರಾಜೇಶ, ಧೈರ್ಯ ಕೊಡುವವರಂತೆ ನನ್ನ ಕೈಯನ್ನು ಮೆಲ್ಲನೆ ಅದುಮುತ್ತಾ 'ನೀವು ಹೋಗುತ್ತಿರುವುದು ಜೈಲಿಗಲ್ಲ, ನಮ್ಮ ಮನೆಗೆ, ರಿಲ್ಯಾಕ್ಸ್ ಆಗಿ. ಸರಿ, ಇವತ್ತೂ ಬಿಳಿ ಸೀರೆನಾ, ಅಂದು ನಾನು ತಂದುಕೊಟ್ಟ ಸೀರೆ ಉಡಬಹುದಿತ್ತು' ಎಂದಾಗ ಮಾತನಾಡದೇ ಕೈಯನ್ನು ರಾಜೇಶನ ಕೈಯಿಂದ ಬಿಡಿಸಿಕೊಂಡು ಸಾಗುವ ದಾರಿಯನ್ನೇ ನೋಡುತ್ತಾ ಕೂತೆ. ಮೌನವೇ ಹಿತವೆನ್ನಿಸಿತು.

ಈ ದಾರಿಯೂ ನನ್ನ ಜೀವನದ ಹಾಗೆ ಎತ್ತ ಸಾಗುತ್ತಿದೆ, ಮುಂದಿರುವ ತಿರುವುಗಳೂ ಗೊತ್ತಿಲ್ಲ. ಕಾರು ಬಂಗ್ಲೆ ಎಂದು ಕರೆಯಬಹುದಾದ ಮನೆಯ ಮುಂದೆ ನಿಂತಿತು. ಮನೆಯ ಮುಂದಿದ್ದ ಹೂದೋಟ, ಉಯ್ಯಾಲೆ ಎಲ್ಲವೂ ಆಕರ್ಷಕವಾಗಿತ್ತು. ಮನೆಯ ಒಳಗೆ ಹೋಗುತ್ತಿದ್ದಂತೆ ರಾಜೇಶನ ಮೂರು ವರ್ಷದ ಮಗಳು 'ಆಂಟಿ' ಎನ್ನುತ್ತಾ ನನ್ನ ಕೈ ಹಿಡಿದು ಕೊಂಡಳು. ಮುದ್ದು ಮುದ್ದಾಗಿ ಮಾತನಾಡಿದಳು. ಮನೆಯ ಒಂದೊಂದೇ ರೂಮುಗಳನ್ನು ನೋಡುತ್ತಾ ಬಾಣಂತನಕ್ಕೆ ಬಂದ ರಾಜೇಶನ ತಂಗಿಯಿದ್ದಲ್ಲಿಗೆ ಬಂದೆವು. ಮಗುವನ್ನಾಡಿಸು ತ್ತಿದ್ದವಳು ನಮ್ಮನ್ನು ನೋಡಿ ಮುಗುಳ್ನಕ್ಕು ಸ್ವಲ್ಪ ಮಾತನಾಡಿದಳು. ಮನೆಯ ಮಹಡಿ ಹತ್ತುತ್ತಿದ್ದಂತೆ ರಾಜೇಶನ ತಂದೆ ಎದುರಾದರು. ಆರಡಿ ಉದ್ದದ ಆಜಾನುಬಾಹು. ತಂದೆಗೆ ಹೋಲಿಸಿದರೆ ರಾಜೇಶ ಸ್ವಲ್ಪ ಕುಳ್ಳ ಎನ್ನಬಹುದು. ಟ್ರ್ಯಾಕ್ ಸೂಟಿನಲ್ಲಿದ್ದ ತಂದೆಗೆ 'ಇವರು ಸುಶೀಲ, ಮೊದಲು ಲೆಕ್ಕದ ಟೀಚರ್ ಆಗಿದ್ದರು, ಈಗ ಆಶ್ರಮದಲ್ಲಿದ್ದಾರೆ, ಎಲ್ಲದರಲ್ಲೂ ಬಹಳ ಚುರುಕು, ಅಮ್ಮನ ಹಾಗೇ' ಎಂದಾಗ ರಾಜೇಶನ ತಂದೆ ಸುಮ್ಮನೆ ಕೈ ಮುಗಿದು ಮಗ ಹೇಳಿದ್ದು ಕೇಳಿಸದವರಂತೆ ಮುಂದೆ ನಡೆದರು. ಅಸಡ್ಡೆಯೋ, ಉದಾಸೀನವೋ, ಅಹಂಕಾರವೋ ತಿಳಿಯದಾಯಿತು. ಅವಮಾನವಾದಂತಾಯಿತು. ಆಗ ರಾಜೇಶ ಮೆಲ್ಲನೆ 'ಡ್ಯಾಡಿ ಹೀಗಿರಲಿಲ್ಲ ಮೊದಲು, ಈಗೀಗ ಯಾವುದರಲ್ಲೂ ಆಸಕ್ತಿಯಿಲ್ಲ, ನಿಮ್ಮಿಂದಾಗಿ ಈ ಮೌನವಲ್ಲ, ತಮ್ಮೊಡನೆಯೇ ಹೋರಾಡುತ್ತಿದ್ದಾರೆ' ಚುಟುಕಾಗಿ ಎಂದಾಗ ನಾನು ಮಾತನಾಡಲಿಲ್ಲ.

ಡೈನಿಂಗ್ ರೂಮಿಗೆ ಬಂದಾಗ ಕೆಲಸದವರು ಸಿಹಿ, ಖಾರ, ಕಾಫಿ ತಂದಿಟ್ಟರು. ಒಲ್ಲದ ಮನಸ್ಸಿನಿಂದಲೇ ತಿಂದು ಮುಗಿಸಿದೆ. ಕಾರಿನಲ್ಲಿ ವಾಪಸ್ಸಾಗುವಾಗ ರಾಜೇಶ ಮೆಲ್ಲನೆ ಮಾತು ತೆಗೆದರು 'ಹೇಗನ್ನಿಸಿತು ನಿಮಗೆ ನಮ್ಮ ಮನೆ?' ಎಂದಾಗ, 'ಮನೆಯೇನೊ ಯಾರೂ ಇಷ್ಟಪಡುವ ಹಾಗೆಯೇ ಇದೆ, ಆದರೆ ಮನೆಯಲ್ಲೇಕೊ ಉದಾಸೀನವಿದೆ, ಏಕೋ ಆಶ್ರಮದ ಗಲಿಬಿಲಿ ಕಂಡವಳಿಗೆ ಮನೆ ಅತೀ ಶಾಂತ ಅನ್ನಿಸಿತು; ಎಂದೆ. 'ಅದಕ್ಕೇ ಹೇಳಿದ್ದು ಮನೆಯಲ್ಲಿ ನಿಮ್ಮಂತವರು ಬೇಕೆಂದು' ಎಂದಾಗ ಮತ್ತೆ ಮೌನಕ್ಕೆ ಶರಣು ಹೋದೆ.

ಆಶ್ರಮ ಸೇರಿದಾಗ ಆಗಲೇ ಗಂಟೆ ಹನ್ನೆರಡಾಗಿತ್ತು. ಹಾಸಿಗೆ ಮೇಲೆ ಸುಮ್ಮನೆ ಕೂತಾಗ ಒಬ್ಬರಾಗಿ ಬಂದು ಮಾತನಾಡತೊಡಗಿದರು. 'ಎಲ್ಲಿ ಹೋಗಿದ್ದಿ ಸುಶೀಲ ಬೆಳಿಗ್ಗೇನೆ?', 'ಇವತ್ತು ಆಡಿಟರ್ ರಾಜೇಶ ಬಂದ ಹಾಗಿಲ್ಲ, ಅದಕ್ಕೇ ಬೇಜಾರೇನೊ', 'ವರ್ಷ ಅರವತ್ತರ ಮೇಲಾದರೂ, ಐವತ್ತರ ಅಂಚಿನಲ್ಲಿದ್ದ ಹಾಗಿದ್ದೀರಿ, ನಿಮ್ಮ ರೂಪ ಯಾರನ್ನು ಬೇಕಾದರೂ ಮರುಳು ಮಾಡಿ ಬುಟ್ಟಿಗೆ ಹಾಕಿಕೊಳ್ಳಬಲ್ಲದು' ಹೀಗೆ ಹಲವು ಮಾತುಗಳು ಕಿವಿಗೆ ಬಿದ್ದವು. ಯಾವುದಕ್ಕೂ ಉತ್ತರಿಸುವ ಗೋಜಿಗೆ ಹೋಗಲಿಲ್ಲ, ಮೊದಲು ನನ್ನನ್ನು ಹಾಡಿ ಹೊಗಳಿದ ನಾಲಿಗೆಗಳೇ ಆಡಿಟರ್ ರಾಜೇಶ ತನ್ನನ್ನು ಹಚ್ಚಿಕೊಳ್ಳತೊಡಗಿದಾಗ ಏನೇನೋ ಸಂಬಂಧ ಗಳನ್ನು ಕಟ್ಟಿದವು. ಗೊಂದಲದಲ್ಲಿದ್ದ ಮನಸ್ಸು ಹಿಂದಕ್ಕೋಡಿತು.

***

'ಯಾರ್‍ರಿ ಲೆಕ್ಕ ಬರ್ದಿರೋದು? ತುಂಬಾ ತಪ್ಪುಗಳಿವೆಯಲ್ಲಾ?' ಎಂದು ಆಡಿಟರ್ ರಾಜೇಶ ಜೋರು ಮಾಡಿದಾಗ ಮ್ಯಾನೇಜರ್ ನನ್ನನ್ನು ಆಡಿಟರ್ ಮುಂದೆ ನಿಲ್ಲಿಸಿದರು. 'ಮೇಡಂ ಹಲವಾರು ತಪ್ಪುಗಳಿವೆ, ಕೆಲಸದವರಿಗೆ ಕೊಟ್ಟ ಸಂಬಳ, ವಾರ್ಷಿಕೋತ್ಸವಕ್ಕೆ ಮಾಡಿದ ಖರ್ಚುಗಳನ್ನು ಎಲ್ಲವನ್ನೂ ಒಟ್ಟು ಸೇರಿಸಿ ಬರೆದಿದ್ದೀರಲ್ಲಾ, ಬೇರೆ ಬೇರೆ ಹೆಡ್ಡಿಂಗಿನ ಅಡಿಯಲ್ಲಿ ಬರೆಯಬೇಕೆಂದು ಗೊತ್ತಿಲ್ಲವೇ? ಅಂತಹ ಹತ್ತಾರು ತಪ್ಪುಗಳಿವೆ'. ಕಣ್ಣಲ್ಲಿ ನೀರಾಡಿತು, ಆಗ ಮ್ಯಾನೇಜರ್ ರಾಜಾರಾಮ ನನ್ನ ಸಹಾಯಕ್ಕೆ ಬಂದರು. 'ಸುಶೀಲಮ್ಮ ಇದೇ ಮೊದಲ ಸಲ ಲೆಕ್ಕ ಬರೆಯುತ್ತಿರುವುದು, ಇಷ್ಟು ವರ್ಷ ಲೆಕ್ಕ ಬರೆಯುತ್ತಿದ್ದ ರಾಘವೇಂದ್ರ ಮಾಸ್ತರ್ ತೀರಿಕೊಂಡರು'.

'ಸರಿ ಸರಿ ಇನ್ನು ಲೆಕ್ಕ ಬರೆಯುವ ರೀತಿಯನ್ನೂ ನಾನೇ ಹೇಳಿ ಕೊಡಬೇಕು, ನನಗೆ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ಮಾತ್ರ ಸ್ವಲ್ಪ ಸಮಯವಿದೆ. ಆಗಲೇ ಬಂದು ಹೇಳಿ ಕೊಡುತ್ತೇನೆ, ಬೇಗ ಬೇಗ ಕಲಿತು ಕೊಂಡರೆ ಆಯಿತು' ಎಂದು ಗುರುಗುಟ್ಟಿದರು ರಾಜೇಶ. ಇಷ್ಟು ವರ್ಷ ಮಕ್ಕಳಿಗೆ ಲೆಕ್ಕ ಹೇಳಿಕೊಡುತ್ತಿದ್ದ ನನ್ನ ಲೆಕ್ಕದಲ್ಲೇ ತಪ್ಪುಗಳನ್ನು ಎತ್ತಿಯಾಡಿದಾಗ ಸಹಿಸಲು ಕಷ್ಟವಾಯಿತು. ಶಾಲೆಯಲ್ಲಿ ಲೆಕ್ಕ ಹೇಳಿಕೊಡುವುದಕ್ಕೂ, ಆಫೀಸಿನ ಲೆಕ್ಕ ಬರೆಯುವ ರೀತಿಯಲ್ಲಿ ವ್ಯತ್ಯಾಸವಿದೆ,